ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಶ್ರೀರಂಗಪಟ್ಟಣ

ಸಿ.ಸಿ.193/2023

| | |
|---|---|
| ಸಿ.ಡಬ್ಲ್ಯೂ ಃ | 14 |
| ಪಿ.ಡಬ್ಲ್ಯೂ ಃ | 8 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಘು |
| ತಂದೆ/ ಪತಿಯ ಹೆಸರು | ಃ | ಪಾಪಣ್ಣ |
| ವಯಸ್ಸು | ಃ | 43 ವರ್ಷ |
| ವೃತ್ತಿ | ಃ | ಆಟೋ ಚಾಲಕ |
| ವಾಸ | ಃ | ಗೌಡಗೆರೆ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 30.06.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಚಾಸಾ-1 ಮತ್ತು 13 ರವರ ಪರಿಚಯ ಇರುತ್ತದೆ . ನನಗೆ ಚಾಸಾ.15 ರವರ ಪರಿಚಯ ಇರುವುದಿಲ್ಲ. ದಿನಾಂಕ 10.12.2012 ರಂದು ಕರಿಗೌಡರ ತೋಟದಲ್ಲಿ ವಿದ್ಯುಚ್ಛಕ್ತಿ ಲೈನ್ ಬಿದ್ದು ಹೋಗಿ ಪ್ರಸನ್ನ ಎಂಬ ಹುಡು ತೀರಿಕೊಂಡಿರುತ್ತಾರೆ. ಆ ಸಂದರ್ಬಲ್ಲಿ ಪೊಲೀಸರು ಮಹಜರ್ ಮಾಡಲು ಬಂದಿದ್ದು ಆಗ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪೊಲೀಸರು ಅಲ್ಲಿ ವಿದ್ಯುಚ್ಛಕ್ತಿ ತಂತಿಯನ್ನು ವಶಪಡಿಸಿಕೊಂಡಿರುತ್ತಾರೆ. ಆ ದಿನ ಸಂಜೆ 3.00 ರಿಂದ 4.00 ಗಂಟೆಯವೆರಗೆ ಪೊಲೀಸರು ಮಹಜರ್ ಮಾಡಿರುತ್ತಾರೆ. ನನ್ನ ಜೊತೆ ಆ ದಿನ ಭಾಸ್ಕರ್ ಹಗಾೂ ನಾಗರಾಜುರವರುಗಳು ಇದ್ದರು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ

ಪಂಚನಾಮೆ ಮಾಡಲು ಪೊಲೀಸರು ನಮಗೆ ನೋಟೀಸ್ ನೀಡಿರುವುದಿಲ್ಲ. ಪೊಲೀಸರು ಎಷ್ಟು ಅಳತೆಯ ವಿದ್ಯುಚ್ಛಕ್ತಿ ವೈರ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ ಎನ್ನುವ

ಪ್ರಶ್ನೆಗೆ ಸಾಕ್ಷಿಯು ಮೇನ್ ವೈರ್ ಅನ್ನು ತೆಗೆದುಕೊಂಡು ಹೋಗಿದ್ದು ಅದರ ಅಳತೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸ್ಥಳಕ್ಕೆ ಸುಮಾರು 3-4 ಜನ ಪೊಲೀಸರು ಬಂದಿದ್ದರು. ಪಂಚನಾಮೆ ಸಂದರ್ಬದಲ್ಲಿ ಸಾರ್ವಜನಿಕರು ಸುಮಾರು 15 ಜನ ಇದ್ದರು. ಪ್ರಸನ್ನ ಎಂಬ ಹುಡುಗ ತೀರಿಹೋಗಿರುವ ಬಗ್ಗೆ ಮಹಜರ್ ನಲ್ಲಿ ಬರೆದಿರುತ್ತದೆ. ಈ ವಿಚಾರ ಹೊರತು ಪಡಿಸಿ ನನಗೆ ಉಳಿದ ವಿಚಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮಹಜರ್ ಗೆ 4 ಜನ ಸಹಿ ಮಾಡಿರಬಹುದು.

ಸ್ಥಳಕ್ಕೆ ಪೊಲೀಸರು ಬಂದಿರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.